**All India Radio: Bangalore**
**National Bulletin In Kannada**
**24.11.2025  1.10 a.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**24.11.2025  1.10 a.m.**

**<>><><*><><<>**

**ಮುಖ್ಯಾಂಶಗಳು**

**೧. ಸುಪ್ರೀಂಕೋರ್ಟ್‌ನ ೫೩ನೇ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾಯಮೂರ್ತಿ ಸೂರ್ಯಕಾಂತ್ ಪ್ರಮಾಣವಚನ ಸ್ವೀಕಾರ**

**೨. ಸಂಕಷ್ಟದಲ್ಲಿರುವ ಮಹಿಳೆಯರಿಗೆ ತ್ವರಿತ ಸಹಾಯ ಒದಗಿಸಲು ರಾಷ್ಟ್ರೀಯ ಮಹಿಳಾ ಆಯೋಗದಿಂದ ನೂತನ ಕಿರು ಸಹಾಯವಾಣಿ**

**೩. ಮುಂಬೈನಲ್ಲಿಂದು ಭಾರತೀಯ ನೌಕಾಪಡೆಗೆ ಐಎನ್‌ಎಸ್ ಮಾಹೆ ಸೇರ್ಪಡೆ**

**೪. ಆರನೇ ಅಂತಾರಾಷ್ಟ್ರೀಯ ಕೃಷಿಶಾಸ್ತ್ರ ಸಮಾವೇಶ ಐಎಸಿ-೨೦೨೫ ನವದೆಹಲಿಯಲ್ಲಿ ಇಂದು ಆರಂಭ**

**೫. ರಾಜಸ್ಥಾನದಲ್ಲಿಂದು ೫ನೇ ಖೇಲೋ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟಕ್ಕೆ ಚಾಲನೆ**

**<>><><*><><<>**

ಸುಪ್ರೀಂಕೋರ್ಟ್‌ನ ೫೩ನೇ ಮುಖ್ಯ ನ್ಯಾಯಮೂರ್ತಿಗಳಾಗಿ ಇಂದು ನ್ಯಾಯಮೂರ್ತಿ ಸೂರ್ಯಕಾಂತ್ ಅಧಿಕಾರ ವಹಿಸಿಕೊಂಡಿದ್ದಾರೆ. ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಸೂರ್ಯಕಾಂತ್ ಅವರಿಗೆ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಮಾಣವಚನ ಬೋಧಿಸಿದರು.  ಈ ವೇಳೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರು ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳು, ಭೂತಾನ್, ಕೀನ್ಯಾ, ಮಲೇಷಿಯಾ, ಬ್ರೆಜಿಲ್, ಮಾರಿಷಿಯಸ್, ನೇಪಾಳ ಮತ್ತು ಶ್ರೀಲಂಕಾದ ಮುಖ್ಯನ್ಯಾಯಮೂರ್ತಿಗಳು ಹಾಗೂ ಇತರ ನ್ಯಾಯಮೂರ್ತಿಗಳು ಉಪಸ್ಥಿತರಿದ್ದರು. ನಿನ್ನೆ ಸಂಜೆ ನಿವೃತ್ತರಾದ ನ್ಯಾಯಮೂರ್ತಿ ಬಿ.ಆರ್ ಗವಾಯಿ ಅವರ ನಂತರ ಅಧಿಕಾರ ವಹಿಸಿಕೊಂಡಿದ್ದಾರೆ. ನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನು ಅಕ್ಟೋಬರ್ ೩೦ ರಂದು ಮುಂದಿನ ಸಿಜೆಐ ಆಗಿ ನೇಮಿಸಲಾಗಿತ್ತು. ಸುಮಾರು ೧೫ ತಿಂಗಳ ಅಧಿಕಾರವಧಿಯನ್ನು ಇಂದು ಆರಂಭಿಸುತ್ತಿರುವ ಅವರು, ೨೦೨೭ರ ಫೆಬ್ರವರಿ ೯ರಂದು

೬೫ ವರ್ಷ ವಯಸ್ಸನ್ನು ಪೂರೈಸಿದ ನಂತರ ನಿವೃತ್ತಿ ಹೊಂದಲಿದ್ದಾರೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಯಶಸ್ವಿ ಅಧಿಕಾರವಧಿಗೆ ಪ್ರಧಾನಿ ನರೇಂದ್ರ ಮೋದಿ ಶುಭ ಹಾರೈಸಿದ್ದಾರೆ.

<>><><*><><<>

ದೇಶಾದ್ಯಂತ ಸಂಕಷ್ಟದಲ್ಲಿರುವ ಮಹಿಳೆಯರಿಗೆ ತ್ವರಿತ ಮತ್ತು ಹೆಚ್ಚು ಸುಲಭವಾಗಿ ಸಹಾಯ ದೊರೆಯುವಂತೆ ಮಾಡಲು ರಾಷ್ಟ್ರೀಯ ಮಹಿಳಾ ಆಯೋಗ ನೂತನ ದಿನದ ೨೪ ಗಂಟೆ ಕಾರ್ಯ ನಿರ್ವಹಿಸುವ ಕಿರು ಸಹಾಯವಾಣಿ ೧-೪-೪-೯-೦ ಯನ್ನು ಬಿಡುಗಡೆ ಮಾಡಿದೆ. ಆಯೋಗದ ಅಸ್ತಿತ್ವದಲ್ಲಿರುವ ಸಹಾಯವಾಣಿಗೆ ಸಂಪರ್ಕಗೊಂಡಿರುವ ಈ ಟೋಲ್ ಫ್ರೀ ಸಂಖ್ಯೆ ಸುಲಭವಾಗಿ ನೆನಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದಾಗಿ ಮಹಿಳೆಯರು ಯಾವುದೇ ವಿಳಂಬವಿಲ್ಲದೇ ಸಹಾಯವನ್ನು ಪಡೆಯಬಹುದು ಎಂದು ಆಯೋಗ ತಿಳಿಸಿದೆ. ಹಿಂಸೆ, ಕಿರುಕುಳ ಅಥವಾ ಯಾವುದೇ ಸಂಕಷ್ಟವನ್ನು ಎದುರಿಸುತ್ತಿರುವ ಮಹಿಳೆಯರಿಗೆ ತ್ವರಿತ ಸಹಾಯ ಒದಗಿಸಲು ಮಹಿಳಾ ಆಯೋಗ ನಡೆಸುತ್ತಿರುವ ಪ್ರಯತ್ನಗಳನ್ನು ಈ ಹೊಸ ಸಹಾಯವಾಣಿ ಬಲಪಡಿಸುತ್ತದೆ.

<>><><*><><<>

ಜೊಹಾನ್ಸ್‌ಬರ್ಗ್ ಜಿ-೨೦ ಶೃಂಗಸಭೆಯ ಯಶಸ್ವಿ ಆಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಇದು ಸಮೃದ್ಧ ಮತ್ತು ಸುಸ್ಥಿರ ಭೂಮಿಗೆ ಕೊಡುಗೆ ನೀಡುತ್ತದೆ ಎಂದು ಪ್ರಧಾನಿ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ಈ ಶೃಂಗಸಭೆಯನ್ನು ಆಯೋಜಿಸಿದ್ದಾಕ್ಕಾಗಿ ದಕ್ಷಿಣ ಆಫ್ರಿಕಾ ಸರ್ಕಾರ, ಅಧ್ಯಕ್ಷ ಸಿರಿಲ್ ರಾಮಪೋಸಾ ಮತ್ತು ದಕ್ಷಿಣ ಆಫ್ರಿಕಾ ಜನರಿಗೆ ಧನ್ಯವಾದ ತಿಳಿಸಿದ್ದಾರೆ. ವಿಶ್ವ ನಾಯಕರೊಂದಿಗಿನ ತಮ್ಮ ಸಭೆಗಳು ಹೆಚ್ಚು ಫಲಪ್ರದವಾಗಿದ್ದವು. ಇವು ವಿವಿಧ ರಾಷ್ಟ್ರಗಳೊಂದಿಗಿನ ದ್ವಿಪಕ್ಷ ಸಂಬಂಧಗಳನ್ನು ಬಲಪಡಿಸಲಿದೆ ಎಂದು ಹೇಳಿದ್ದಾರೆ. ಶೃಂಗಸಭೆಯಲ್ಲಿ ಭಾಗವಹಿಸಿದ ನಂತರ ಪ್ರಧಾನಿ ನರೇಂದ್ರ ಮೋದಿ ಇಂದು ಬೆಳಗ್ಗೆ ನವದೆಹಲಿಗೆ ಆಗಮಿಸಿದರು. ತಮ್ಮ ದಕ್ಷಿಣ ಆಫ್ರಿಕಾ ಭೇಟಿಯ ವೇಳೆ ಅವರು, ಫ್ರಾನ್ಸ್, ಜರ್ಮನ್, ಇಟಲಿ, ಇಥಿಯೊಪಿಯಾ, ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ ಹಾಗೂ ವಿಶ್ವ ವ್ಯಾಪಾರ ಸಂಸ್ಥೆಯ ನಾಯಕರೊಂದಿಗೆ ಪ್ರಧಾನಿ ಮಾತುಕತೆ ನಡೆಸಿದರು. ನಿನ್ನೆ ಶೃಂಗಸಭೆಯ ೩ನೇ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ ಪ್ರಧಾನಿ, ಭಾರತದ ಕೃತಕಬುದ್ಧಿಮತ್ತೆ ಯೋಜನೆಯ ಕುರಿತು ಬೆಳಕು ಚೆಲ್ಲಿದರು. ಹಾಗೂ ೨೦೨೬ರ ಫೆಬ್ರವರಿಯಲ್ಲಿ ನಡೆಯಲಿರುವ ಎಐ ಇಂಪ್ಯಾಕ್ಟ್ ಶೃಂಗಸಭೆಗೆ ಜಾಗತಿಕ ನಾಯಕರನ್ನು ಸ್ವಾಗತಿಸಲು ಭಾರತ ಎದುರು ನೋಡುತ್ತಿದೆ ಎಂದರು.

**<>><><*><><<>**

ಭಾರತೀಯ ನೌಕಾಪಡೆಯು ಇಂದು ಮುಂಬೈನ ನೌಕಾ ಡಾಕ್‌ಯಾರ್ಡ್‌ನಲ್ಲಿ ಮಾಹೆ ವರ್ಗದ ಮೊದಲ ಜಲಂತರ್ಗಾಮಿ ವಿರೋಧಿ ನೌಕೆ-ಐಎನ್‌ಎಸ್ ಮಾಹೆಯನ್ನು ಭಾರತೀಯ ನೌಕಾಪಡೆಗೆ ನಿಯೋಜಿಸಿದೆ. ಈ ನೌಕೆಯು ಪಶ್ಚಿಮ ಸಮುದ್ರ ತೀರದಲ್ಲಿ ಕಾರ್ಯ ನಿರ್ವಹಿಸಲಿದೆ. ಈ ಸಮಾರಂಭದ ಅಧ್ಯಕ್ಷತೆಯನ್ನು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ವಹಿಸಿದ್ದರು. ಈ ವೇಳೆ ಮಾತನಾಡಿದ ಅವರು, ಸಮನ್ವಯತೆಯಲ್ಲಿ ಸಶಸ್ತ್ರ ಪಡೆಗಳ ನಿಜವಾದ ಶಕ್ತಿ ಅಡಗಿದೆ. ಭಾರತೀಯ ಸೇನೆ ಒಂದು ಬೃಹತ್ ಪರಿವರ್ತನಾ ಯೋಜನೆಯಡಿ ಸರಣಿ ಸುಧಾರಣೆಗಳನ್ನು ಕೈಗೊಳ್ಳುತ್ತಿದೆ. ಭಯೋತ್ಪಾದನಾ ಮೂಲಸೌಕರ್ಯವನ್ನು ಗುರಿಯಾಗಿಸಿ ನಡೆಸಿದ ಆಪರೇಷನ್ ಸಿಂಧೂರ್ ಸಶಸ್ತ್ರ ಪಡೆಗಳ ನಡುವಿನ ಸಮನ್ವಯತೆಯ ಸೂಕ್ತ ಪ್ರದರ್ಶನವಾಗಿದೆ ಎಂದು ಹೇಳಿದ್ದಾರೆ. ಸಮುದ್ರದ ಆಳದಿಂದ ದೇಶದ ಅತಿ ಎತ್ತರದ ಗಡಿಗಳಲ್ಲಿ ಕಾರ್ಯನಿರ್ವಹಿಸುವ ದೇಶದ ರಕ್ಷಣಾ ಸಾಮರ್ಥ್ಯವು ಅದರ ಭದ್ರತಾ ಪ್ರಭಾವವನ್ನು ವ್ಯಾಖ್ಯಾನಿಸುತ್ತದೆ ಎಂದು ತಿಳಿಸಿದ್ದಾರೆ.

**ಧ್ವನಿ : ಉಪೇಂದ್ರ ದ್ವಿವೇದಿ (೩೧ ಸೆಕೆಂಡ್‌ಗಳು)**

ಕೊಚ್ಚಿನ್, ಶಿಪ್‌ಯಾರ್ಡ್‌ನಿಂದ ನಿರ್ಮಿಸಲ್ಪಟ್ಟ ಐಎನ್‌ಎಸ್ ಮಾಹೆ ಆತ್ಮ ನಿರ್ಭರ ಭಾರತ್ ಉಪಕ್ರಮದಡಿ ದೇಶದ ಹಡಗು ನಿರ್ಮಾಣ ಪರಿಸರ ವ್ಯವಸ್ಥೆಯ ಬೆಳೆಯುತ್ತಿರುವ ಸಾಮರ್ಥ್ಯಗಳಿಗೆ ಸಾಕ್ಷಿಯಾಗಿದೆ. ೮೦ ಪ್ರತಿಶತಕ್ಕಿಂತ ಹೆಚ್ಚಿನ ಸ್ಥಳೀಯ ವಸ್ತುಗಳನ್ನು ಹೊಂದಿರುವ ಈ ಹಡಗು ಯುದ್ಧನೌಕೆ ವಿನ್ಯಾಸ, ನಿರ್ಮಾಣ ಮತ್ತು ವ್ಯವಸ್ಥೆಗಳ ಏಕೀಕರಣದಲ್ಲಿ ರಾಷ್ಟ್ರದ ತಾಂತ್ರಿಕ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ. ಇದು ಪಶ್ಚಿಮ ಸಮುದ್ರ ತೀರದಲ್ಲಿ ಮೌನ ಬೇಟೆಗಾರನಾಗಿ ಕಾರ್ಯ ನಿರ್ವಹಿಸಲಿದೆ.

**<>><><*><><<>**

ಆರನೇ ಅಂತಾರಾಷ್ಟ್ರೀಯ ಕೃಷಿಶಾಸ್ತ್ರ ಸಮಾವೇಶ ಐಎಸಿ-೨೦೨೫ ಇಂದು ನವದೆಹಲಿಯಲ್ಲಿ ಆರಂಭವಾಗಲಿದೆ. ಕಾರ್ಯಕ್ರಮವನ್ನು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್‌ಸಿಂಗ್ ಚೌಹ್ವಾಣ್ ಉದ್ಘಾಟಿಸಲಿದ್ದಾರೆ. ಮೂರು ದಿನಗಳ ಈ ಕಾರ್ಯಕ್ರಮದಲ್ಲಿ ಅಧಿವೇಶನಗಳು, ವಿಷಯಾಧಾರಿತ ವಿಚಾರ ಸಂಕಿರಣಗಳು, ಉಪನ್ಯಾಸಗಳು, ಪ್ರಸ್ತುತಿಗಳು, ವಸ್ತು ಪ್ರದರ್ಶನ ಮತ್ತು ಯುವ ವಿಜ್ಞಾನಿಗಳು ಮತ್ತು ವಿದ್ಯಾರ್ಥಿಗಳ ಸಮ್ಮೇಳನ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ೧ ಸಾವಿರಕ್ಕೂ ಅಧಿಕ ಜಾಗತಿಕ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ. ಇದು ವಿಶ್ವಮಟ್ಟದ ವೈಜ್ಞಾನಿಕ ವಿಚಾರ ವಿನಿಮಯಕ್ಕೆ ವೇದಿಕೆ ಒದಗಿಸಲಿದೆ ಎಂದು ಕೃಷಿ ಮತ್ತು

ರೈತರ ಕಲ್ಯಾಣ ಸಚಿವಾಲಯ ತಿಳಿಸಿದೆ. ಸ್ಮಾರ್ಟ್ ಕೃಷಿ ಆಹಾರ ವ್ಯವಸ್ಥೆಗಳು ಮತ್ತು ಪರಿಸರ ಸಂರಕ್ಷಣೆಗಾಗಿ ಕೃಷಿ ಶಾಸ್ತ್ರದ ಮರುಕಲ್ಪನೆ ಎಂಬುದು ಈ ಸಮಾವೇಶದ ಧ್ಯೇಯವಾಕ್ಯವಾಗಿದೆ.

<>><><*><><<>

೫೬ನೇ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ೫ನೇ ದಿನಕ್ಕೆ ಕಾಲಿಟ್ಟಿದೆ. ಇದರ ಭಾಗವಾಗಿ ನಡೆಯುತ್ತಿರುವ ವೇವ್ಸ್ ಫಿಲಂ ಬಜಾರ್ ಚಲನಚಿತ್ರ ನಿರ್ಮಾಪಕರು ಮತ್ತು ಸೃಜನಶೀಲ ಕಲಾವಿದರನ್ನು ಆಕರ್ಷಿಸುತ್ತಿದೆ. ಇಫಿಯ ಇತಿಹಾಸದಲ್ಲೇ ಮೊದಲ ಬಾರಿ ಎಐ ಹ್ಯಾಕಥಾನ್ ಅನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮ ಚಲನಚಿತ್ರ ಮತ್ತು ಕೃತಕಬುದ್ಧಿಮತ್ತೆಯ ಸಮ್ಮಿಲನವಾದ ಈ ವೇದಿಕೆಗೆ ಚಿತ್ರ ನಿರ್ಮಾಪಕರು ಮತ್ತು ತಂತ್ರಜ್ಞರನ್ನು ಕರೆ ತರುತ್ತಿದೆ. ಡೆವಲಪರ್‌ಗಳು ಮತ್ತು ವಿಷಯ ತಜ್ಞರು ಚಲನಚಿತ್ರಗಳಿಗೆ ಪೂರಕವಾಗುವ ಕೃತಕಬುದ್ಧಿಮತ್ತೆ ಚಾಲಿತ ಉತ್ಪನ್ನಗಳನ್ನು ವಿನ್ಯಾಸಗೊಳಿಸಲು ಈ ವೇದಿಕೆಯಡಿ ಒಟ್ಟುಗೂಡುತ್ತಿದ್ದಾರೆ. ಫ್ಯೂಮ್ ಒ ಮಾರ್ಟೆ ಇಂದು ಮೊದಲು ಪ್ರದರ್ಶನಗೊಳ್ಳುವ ಚಿತ್ರವಾಗಿದೆ. ಟು ಸ್ಟ್ರೇಂಜರ್ಸ್, ಟು ಸೀಸನ್ಸ್ ಎಂಬ ಮೊದಲ ಜಪಾನೀಸ್ ಚಲನಚಿತ್ರವು ಇಂದು ಪ್ರದರ್ಶನಗೊಳ್ಳುತ್ತಿದೆ.

ಮುನ್ನಾ ಬಾಯಿ ಎಂಬಿಬಿಎಸ್ ಖ್ಯಾತಿಯ ಚಲನಚಿತ್ರ ನಿರ್ಮಾಪಕ ಮತ್ತು ಸಂಪಾದಕ ರಾಜು ಗಿರಾನಿ ಇಂದು ಎಡಿಟಿಂಗ್ ಕುರಿತು ಮಾಸ್ಟರ್ ಕ್ಲಾಸ್ ತೆಗೆದುಕೊಳ್ಳಲಿದ್ದಾರೆ.

<>><><*><><<>

ಇತ್ತೀಚೆಗೆ ಕೇಂದ್ರ ಸರ್ಕಾರ ಕಾರ್ಮಿಕ ಕಾನೂನುಗಳಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಘೋಷಿಸಿರುವ ೪ ಕಾರ್ಮಿಕ ಸಂಹಿತೆಗಳನ್ನು ವ್ಯಾಪಾರ ಒಕ್ಕೂಟ ಸಮನ್ವಯ ಕೇಂದ್ರದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿಯೊ ಪ್ರಸಾದ್ ತಿವಾರಿ ಸ್ವಾಗತಿಸಿದ್ದಾರೆ. ಈ ಸುಧಾರಣೆಗಳು ೪೫ ಕೋಟಿ ಅಸುರಕ್ಷಿತ ಕಾರ್ಮಿಕರನ್ನು ಸಾಮಾಜಿಕ ಭದ್ರತೆಯ ಅಡಿಯಲ್ಲಿ ತರುವ ಮತ್ತು ಭಾರತದ ಕಾರ್ಯಪಡೆಯನ್ನು ಪರಿವರ್ತಿಸುವ ಐತಿಹಾಸಿಕ ಕ್ರಮಗಳಾಗಿವೆ ಎಂದು ಅವರು ಬಣ್ಣಿಸಿದ್ದಾರೆ.

<>><><*><><<>

೫ನೇ ಆವೃತ್ತಿಯ ಖೇಲೋ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟಕ್ಕೆ ರಾಜಸ್ಥಾನದಲ್ಲಿಂದು ಚಾಲನೆ ದೊರೆಯಲಿದೆ. ದೇಶಾದ್ಯಂತದ ೨೩೦ ವಿಶ್ವವಿದ್ಯಾಲಯಗಳಿಂದ ಸುಮಾರು ೫ ಸಾವಿರ ವಿದ್ಯಾರ್ಥಿ ಕ್ರೀಡಾಕೂಟಗಳು ಈ ಬೃಹತ್ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ. ಖೋಖೋ ಪ್ರದರ್ಶನ ಪಂದ್ಯದೊಂದಿಗೆ ಒಟ್ಟು ೨೩ ಕ್ರೀಡಾ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ.

ಜೈಪುರ, ಉದಯಪುರ, ಜೋಧಪುರ, ಕೋಟಾ, ಅಜ್ಮೀರ್, ಭರತ್‌ಪುರ್ ಮತ್ತು ಬಿಕಾನೇರ್‌ನಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಇಂದು ಸಂಜೆ ಜೈಪುರದ ಸವಾಯಿ ಮಾನ್ಸಿಂಗ್ ಕ್ರೀಡಾಂಗಣದಲ್ಲಿ ನಡೆಯಲಿರುವ ಉದ್ಘಾಟನಾ ಸಮಾರಂಭದಲ್ಲಿ ರಾಜಸ್ಥಾನ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮ, ಕೇಂದ್ರ ಯುವವ್ಯವಹಾರ ಮತ್ತು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಮತ್ತಿತರರು ಭಾಗವಹಿಸಲಿದ್ದಾರೆ.

**<>><><*><><<>**

ಗುವಾಹಟಿಯ ಬರ್ಸಪಾರಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ-ದಕ್ಷಿಣ ಆಫ್ರಿಕಾ ಎರಡನೇ ಮತ್ತು ಅಂತಿಮ ಟೆಸ್ಟ್‌ನ ಮೂರನೇ ದಿನದಾಟದಲ್ಲಿಂದು ಭಾರತ ತನ್ನ ಮೊದಲ ಇನ್ನಿಂಗ್ಸ್ ಅನ್ನು ಮುಂದುವರಿಸಿದ್ದು, ಇತ್ತೀಚಿನ ವರದಿ ಬಂದಾಗ ೭ ವಿಕೆಟ್ ನಷ್ಟಕ್ಕೆ ೧೬೪ ರನ್ ಗಳಿಸಿ ಆಡುತ್ತಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>**